3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.431/2018**

ಪ್ರಾಸಾ 8

ಚಾಸಾ 8

| | |
|---|---|
| ಹೆಸರು | ಮಂಜೇಶ್ ಹೆಚ್.ಎಸ್ |
| ತಂದೆಯ ಹೆಸರು | ಲೇಟ್ ಸಿದ್ದರಾಜು |
| ವಯಸ್ಸು | 35 ವರ್ಷ |
| ಉದ್ಯೋಗ | ಅರ್ಚಕ |
| ವಾಸಸ್ಥಳ | ಹಳೇಊರು |

ಸಾಕ್ಷಿಯನ್ನು ದಿನಾಂಕ 30.10.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಚಾಸಾ.1 ರವರು ಗೊತ್ತು. ಆರೋಪಿಗಳು ಗೊತ್ತು. ನಾನು ಹಳೇಊರು ಗ್ರಾಮದಲ್ಲಿ ಹಳೇಊರಮ್ಮ ದೇವಸ್ಥಾನದಲ್ಲಿ ಅರ್ಚಕನಾಗಿ ಕೆಲಸ ಮಾಡುತ್ತಿದ್ದೇನೆ. 2018 ರಲ್ಲಿ ಹಳೇಊರಮ್ಮ ಉತ್ಸವಮೂರ್ತಿಯನ್ನು ಭಕ್ತಾದಿಕಾರಿಗಳು ಬೆಂಗಳೂರಿಗೆ ಟೆಂಪೋ ವಾಹನದಲ್ಲಿ ತೆಗೆದುಕೊಂಡು ಹೋಗಿದ್ದರು. ಮಾರನೇ ದಿನ ಉತ್ಸವಮೂರ್ತಿಯನ್ನು ತಂದು ದೇವಸ್ಥಾನದಲ್ಲಿ ಇಟ್ಟಿರುತ್ತಾರೆ. ಉತ್ಸವಮೂರ್ತಿಯನ್ನು ತೆಗೆದುಕೊಂಡು ಹೋದಾಗ ಗಲಾಟೆಯಾಗಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ. ಗಲಾಟೆಯ ಬಗ್ಗೆ ನನಗೆ ಹೆಚ್ಚಿನ ವಿವರಗಳು ಗೊತ್ತಿಲ್ಲ. ಪೊಲೀಸರು ದೇವಸ್ಥಾನಕ್ಕೆ ಬಂದು ನನ್ನ ಸಹಿಯನ್ನು ಪಡೆದುಕೊಂಡು ಹೋಗಿರುತ್ತಾರೆ. ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ನಾನು ಕಾಣುತ್ತೇನೆ. ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು

ಹುಲಿಯೂರುದುರ್ಗ ಪೋಲೀಸ್ ಠಾಣೆಯಲ್ಲಿ ತೆಗೆದಿರುತ್ತಾರೆ. ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದರು. ಆಗ ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ಹೇಳಿರುತ್ತೇನೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**<u>ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ</u>**

2) ದಿನಾಂಕ 11.08.2018 ರಂದು ಹಳೇಊರುಗ್ರಾಮದ ಶ್ರೀಕಾಂತರವರ KA.02.B.7097 ರ ವಾಹನದಲ್ಲಿ ದೇವರ ಜೊತೆಯಲ್ಲಿ ತಮಟೆ ಬಡಿಯುವ ಕೆಲಸಕ್ಕೆ ಹಳೇಊರು ಗ್ರಾಮದ ಭರತ, ರಘು, ಪ್ರತಾಪರವರು, ಅರ್ಚಕರಾಗಿ ಕಾರ್ತಿಕ್ ಮತ್ತು ಅರುಣ್ ಕುಮಾರ್ ರವರು ಹೋಗಿ ಪೂಜೆ ಮುಗಿಸಿಕೊಂಡು ದಿನಾಂಕ 12.08.2018 ರಂದು ಸಂಜೆ 4.45 ಗಂಟೆಯಿಂದ 5 ಗಂಟೆಯಲ್ಲಿ ಹಳೇಊರಮ್ಮ ದೇವರ ಉತ್ಸವಮೂರ್ತಿಯನ್ನು ತಂದು ವಾಪಸ್ ಇಟ್ಟಿರುತ್ತಾರೆ ಎಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

3) ನಂತರ ಗ್ರಾಮದಲ್ಲಿ ತಿಳಿದ ವಿಚಾರವೇನೆಂದರೆ ಕುಣಿಗಲ್ ತಾಲ್ಲೂಕಿನ ರಾಜೇಂದ್ರಪುರ ಗೇಟ್ ಹತ್ತಿರ ರಸ್ತೆಯಲ್ಲಿ ಸಂಜೆ 4 ಗಂಟೆಗೆ ತಮಟೆ ಬಡಿಯುವ ಚಾಸಾ.1 ಮತ್ತು ಆರೋಪಿಗಳು ಚಾಸಾ.1 ರವರನ್ನು ಮಲಗಿದ್ದಂತಹ ಸಮಯದಲ್ಲಿ ವಯಸ್ಸಾದ ಚಿಕ್ಕಓಬಯ್ಯನಿಗೆ ಆಕಸ್ಮಿಕವಾಗಿ ಕಾಲು ತಗಲಿರುವ ವಿಚಾರದಲಿಲ ಗಲಾಟೆ ಮಡಿಕೊಂಡು ಲೇ ಹೊಲೆಯ, ಮಾದಿಗ ನನ್ನ ಮಕ್ಕಳಾ ಎಂದು ಜಾತಿ ನಿಂದನೆ ಹಲ್ಲೆ

ಮಾಡಿರುತ್ತಾರೆಂದು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಸರಿ. ದಿಃ 15.08.2018 ರಂದು ಚಾಸಾ.1 ರವರು ಹುಲಿಯೂರುದುರ್ಗ ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾರೆಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ನನಗೆ ಕನ್ನಡ ಓದಲು ಬರುತ್ತದೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.S.R.R. ವಕೀಲರಿಂದ :**

4) ಪೊಲೀಸರು ಏನು ಬರೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಯಾವ ವಿಚಾರಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ